ಕೆ.ಎಂ.ಎಫ್. ನಲ್ಲಿ ಪಶು ಆಹಾರ ಸಾಮಗ್ರಿ

4856 - ಕೆ.ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೆ.ಎಂ.ಎಫ್. ನಲ್ಲಿ ಪಶು ಆಹಾರ ಸಾಮಗ್ರಿಗಳನ್ನು 1997-2000 ರವರೆಗೆ ಖರೀದಿ ಮಾಡಲು ಆಗಿರುವ ವೆಚ್ಚವೆಷ್ಟು?*

ಆ) *ಇದನ್ನು ಖರೀದಿ ಮಾಡಲು ಅನುಸರಿಸುವ ಮಾರ್ಗಗಳೇನು?*

ಇ) *ಇದಕ್ಕೆ ಸರ್ಕಾರದ ಅನುಮತಿ ಪಡೆಯಲಾಗಿದೆಯೇ? (ವಿವರಗಳನ್ನು ಒದಗಿಸುವುದು)*

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು) :

ಅ) ಕರ್ನಾಟಕ ಹಾಲು ಮಹಾ ಮಂಡಳದಲ್ಲಿ ಪಶು ಆಹಾರ ಸಾಮಗ್ರಿಗಳನ್ನು 1997-2000 ರವರೆಗೆ ಖರೀದಿ ಮಾಡಲು ಆಗಿರುವ ಖರ್ಚು ರೂ. 98.60 ಕೋಟಿಗಳು.

ಆ) ಖರೀದಿಗಳನ್ನು ಪರ್‌ಚೇಸ್ ಮ್ಯಾನುಯಲ್ (ಡೈನಮಿಕ್ ಪರ್‌ಚೇಸ್ ಪ್ರಸ್ಯೂಜರ್) ಪ್ರಕಾರ ಕೆ.ಎಂ.ಎಫ್. ನ ಆಡಳಿತ ಮಂಡಳಿ ಅನುಮೋದನೆ ಪಡೆದು ಖರೀದಿಸಲಾಗಿದೆ.

ಇ) ಇಲ್ಲ.

ಕರ್ನಾಟಕ ಗೃಹ ಮಂಡಳಿಯಲ್ಲಿನ ಅವ್ಯವಹಾರ

4860 - ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ಗೃಹ ಮಂಡಳಿಯಲ್ಲಿ ಗುತ್ತಿಗೆದಾರರು ಇಟ್ಟಿದ್ದ ಎರಡು ಕೋಟಿ ರೂ.ಠೇವಣಿ ಹಣವನ್ನು ನಾಲ್ಕು ವರ್ಷಗಳ ಹಿಂದೆ ಖಾಸಗಿ ಫೈನಾನ್ಸ್ ಕಂಪನಿಯಲ್ಲಿ ನಿಯಮಗಳಿಗೆ ವಿರುದ್ಧವಾಗಿ ಠೇವಣಿ ಇಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?*

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :

ಅ) ಬಂದಿದೆ.

ಆ) ಸದರಿ ವಿಷಯದ ಬಗ್ಗೆ ಕರ್ನಾಟಕ ಗೃಹ ಮಂಡಳಿಯು ಹಣವನ್ನು ವಸೂಲು ಮಾಡಲು ನ್ಯಾಯಾಲಯದಲ್ಲಿ ಕ್ರಿಮಿನಲ್ ಹಾಗೂ ಸಿವಿಲ್ ದಾವೆ ಹೂಡಲಾಗಿದೆ. ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಇಲಾಖಾ ವಿಚಾರಣೆ ನಡೆಸಲಾಗಿದೆ. ಒಬ್ಬರಿಗೆ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮವಿಲ್ಲದಂತೆ ತಡೆಹಿಡಿಯುವ ದಂಡನೆಯನ್ನು ವಿಧಿಸಲಾಗಿದೆ. ಮತ್ತೊಬ್ಬ ಅಧಿಕಾರಿಯ ಮೇಲೆ

ಇಲಾಖಾ ವಿಚಾರಣೆ ನಡೆಸಲು ಸರ್ಕಾರವು ಅಡಿಷನಲ್ ರಿಜಿಸ್ಟ್ರಾರ್ ಆಫ್ ಎನ್‌ಕ್ವೈರೀಸ್, ಕರ್ನಾಟಕ ಲೋಕಾಯುಕ್ತ ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿದೆ.

ಸ್ವರ್ಣ ಭಾರತಿ ಸಹಕಾರಿ ಬ್ಯಾಂಕ್ ಕೆ.ಆರ್. ರೋಡ್, ಬೆಂಗಳೂರು ಇಲ್ಲಿನ ಅವ್ಯವಹಾರಗಳು

4861 - ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಸ್ವರ್ಣಭಾರತಿ ಸಹಕಾರ ಬ್ಯಾಂಕ್ ನಿ, ಕೆ.ಆರ್.ರಸ್ತೆ, ಬೆಂಗಳೂರು ಇಲ್ಲಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*
2. *ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು?*
3. *ಬೋರ್ಡ್ ನಡವಳಿಗಳನ್ನು ತಪ್ಪಾಗಿ ದಾಖಲಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*
4. *ಈ ಬಗ್ಗೆ ಸರ್ಕಾರದ ಕ್ರಮಗಳೇನು?*

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು) :

1. ಬಂದಿರುವುದಿಲ್ಲ.
2. ಉದ್ಭವಿಸುವುದಿಲ್ಲ.
3. ಬಂದಿರುವುದಿಲ್ಲ.
4. ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ರೈತ ಬಜಾರ್ ಪ್ರಾರಂಭಿಸುವುದು

4863 - ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಮಾರುಕಟ್ಟೆಯವರು ರೈತ ಬಜಾರ್‌ಗಳನ್ನು ಯಾವ ಯಾವ ಸ್ಥಳಗಳಲ್ಲಿ ಪ್ರಾರಂಭಿಸಲಾಗುವುದು ವಿವರ ನೀಡುವುದು?*

ಆ) *ಈ ರೈತ ಬಜಾರ್‌ದ ಮುಖ್ಯ ಉದ್ದೇಶಗಳೇನು? ಹಾಗೂ ಇದರಿಂದ ರೈತರಿಗೆ ಆಗುವ ಪ್ರಯೋಜನಗಳೇನು?*

ಇ) *ರಾಜ್ಯದಲ್ಲಿ ಈಗಾಗಲೇ ಪ್ರತಿಯೊಂದು ತಾಲ್ಲೂಕಿನಲ್ಲಿ ತಾಲ್ಲೂಕ್ ಮಾರ್ಕೆಟಿಂಗ್ ಸೊಸೈಟಿಯು ಇದ್ದು, ಇವುಗಳನ್ನು ಬಲಪಡಿಸಿದಲ್ಲಿ ರೈತರಿಗೆ ಅನುಕೂಲವಾಗುವುದಿಲ್ಲವೇ?*

ಶ್ರೀ ಆರ್.ಬಿ. ತಿಮ್ಮಾಪುರ್ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :